(iii) re : non availablity of theatres to Kannada films produced by F.D.C.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರ)—ಮಾನ್ಯ ಅಧ್ಯಕ್ಷರೆ, ಕನ್ನಡ ರಾಜ್ಯದ ರಾಜಧಾನಿಯಾದ ಬೆಂಗಳೂರು ನಗರವಲ್ಲಿ ಕನ್ನಡ ಚಲನಚಿತ್ರಗಳ ಪ್ರದರ್ಶನಕ್ಕೆ ಬಂದಿರುವ ದುರ್ಗತಿಯನ್ನು ಈ ಸಭೆಯ ಮುಂದೆ ಪ್ರಸ್ತಾಪಿಸಬೇಕಾಗಿದೆ. ಕರ್ನಾಟಕ ರಾಜ್ಯ ಜಲನಚಿತ್ರ ಅಭಿವೃದ್ಧಿ ಸಂಸ್ಥೆಯವರು ಈಗಾಗಲೇ ನಾಲ್ಕು ಕನ್ನಡ ಚಲನಚಿತ್ರಗಳನ್ನು ತೆಗೆಯಲು ಸುಮಾರು ನಲವತ್ತು ಲಕ್ಷ ರೂಪಾಯಿಗಳನ್ನು ನೀಡಿದ್ದಾರೆ. ಆವುಗಳಲ್ಲಿ ಎರಡು ಚಿತ್ರಗಳು ಸಂಪೂರ್ಣವಾಗಿ ಸಿದ್ಧವಾಗಿದ್ದು, ಇದರಲ್ಲೊಂದು ಚಿತ್ರ ಈಗಾಗಲೇ ಪ್ರದರ್ಶನವನ್ನು ಕಂಡಿದೆ. ನಾನು ಈ ಪ್ರಸ್ತಾವನೆಯನ್ನು ಕಳುಹಿಸಿದ್ದು ಕಳೆದ ತಿಂಗಳು ೨೮ನೇ ತಾರೀಖು. ಆವತ್ತಿನ ದಿವಸ ಶ್ರೇಷ್ಠ ಚಲನಚಿತ್ರ ನಿರ್ಮಾಪಕ ಶ್ರೀ ಬಿ. ಎಸ್. ರಂಗಾ ಅವರು ತಯಾರಿಸಿದ ''ಸುಳಿ'' ಕನ್ನಡ ಚಿತ್ರ ಮೆಜಸ್ಟಿಕ್ ಚಿತ್ರಮಂದಿರದಲ್ಲಿ ತೆರೆಕಾಣಬೇಕಾಗಿತ್ತು. ತೆರೆಕಾಣಲು ಸಕಲ ಸಿದ್ಧತೆಗಳನ್ನೂ ಮಾಡಿಕೊಳ್ಳಲಾಗಿತ್ತು. ಅಂದು, ರಾಜ್ಯದ ಮೂಲೆ ಮೂಲೆಗಳಲ್ಲಿರುವ ಚಿತ್ರಮಂದಿರಗಳಲ್ಲೂ ಈ ಚಿತ್ರವನ್ನು ಬಿಡುಗಡೆ ಮಾಡುವುದಕ್ಕೂ ಸಿದ್ಧತೆ ಮಾಡಿಕೊಳ್ಳಲಾಗಿತ್ತು.

ಆದರೆ ಏನಾಗಿದೆ ಎಂದರೆ, ೨೮ನೇ ತಾರೀಖು ಸಿದ್ಧತೆಯನ್ನು ಮಾಡಿಕೊಂಡಾಗ, ಮೆಜಸ್ಟಿಕ್ ಟಾಕೀಸಿನಲ್ಲಿ ರಿಲೀಜ್ ಮಾಡಬೇಕು ಎಂದು ತೀರ್ಮಾನ ಆಗಿದ್ದರೂ ಏಕಾಏಕಿಯಾಗಿ ಆ ಒಂದು ಥಿಯೇಟರಿನ ಮಾಲೀಕರು ಈ ಚಲನಚಿತ್ರವನ್ನು ರದ್ದು ಮಾಡಿ ಇಂಗ್ಲೀಷ್ ಚಿತ್ರವನ್ನು ಹಾಕಿಕೊಂಡರು. ಏತಕ್ಕೆ ಹೀಗೆ ಮಾಡುತ್ತಿದ್ದಾರೆ ಎಂಬುದು ಗೊತ್ತಾಗಲಿಲ್ಲ. 'ಪಡುವಾರಳ್ಳಿ ಪಾಂಡವರು' ಎನ್ನುವ ಒಂದು ಚಲನಚಿತ್ರ ೫೦ ದಿವಸಗಳು ಹೌಸ್‌ಫುಲ್ ಆಗಿ ನಡೆದರೂ ಕೂಡ ರಾತ್ರೋ ರಾತ್ರಿ ಯಾವುದೋ ಒಂದು ಹಿಂದಿ ಚಲನಚಿತ್ರವನ್ನು ಸೆಕೆಂಡ್ ಷೋಗೆ ಇಟರ್‌ಡ್ಯೂಜ್ ಮಾಡಿದರು. ಆಗ ಜನಗಳು ಪ್ರೊಟೆಸ್ಟ್ ಮಾಡಿದರು. ಆಮೇಲೆ ಎರಡು ಮೂರು ದಿವಸಗಳ ನಂತರ ಮತ್ತೆ ಅದೇ ಕನ್ನಡ ಚಿತ್ರವನ್ನು ಪ್ರದರ್ಶನ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಕನ್ನಡ ಚಲನಚಿತ್ರದ ಬಗ್ಗೆ ಥಿಯೇಟರಿನ ಮಾಲೀಕರಿಂದ, ಡಿಸ್ಟ್ರಿಬ್ಯೂಟರಿಂದ ತೊಂದರೆಯಾಗುತ್ತದೆ ಎಂಬುದನ್ನು ಹೇಳುತ್ತಾರೆ. ಸುಳಿ ಎನ್ನುವ ಒಂದು ಚಿತ್ರವು ಪ್ರದರ್ಶನಕ್ಕೆ ಬರಬೇಕಾಗಿತ್ತು. ಆದನ್ನು ಏಕಾಏಕಿ ರದ್ದು ಮಾಡಿ ಇಂಗ್ಲೀಷ್ ಚಿತ್ರವನ್ನು ಹಾಕಿದರು. ಹೀಗೆ ಕನ್ನಡ ಚಲನಚಿತ್ರವನ್ನು ತುಳಿಯತಕ್ಕ ಚಿತ್ರಮಂದಿರಗಳಾಗಿವೆ. ಇನ್ನೊಂದು ಕನ್ನಡ ಚಿತ್ರ ಪ್ರದರ್ಶನಕ್ಕೆ ಬಂದಿದ್ದರೂ ಕೂಡ ಅದಕ್ಕೆ ಯಾವ ಥಿಯೇಟರಿನಲ್ಲಿಯೂ ಕೂಡ ಸ್ಥಳ ಸಿಕ್ಕುತ್ತಿಲ್ಲ. ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರು ಸರ್ಕಾರಕ್ಕೆ ಒಂದು ಭರವಸೆಯನ್ನು ಕೊಟ್ಟಿದ್ದಾರೆ. ಅದರೆ ಏನೆಂದರೆ ಕನ್ನಡ ಚಲನಚಿತ್ರಗಳನ್ನು ಕನಿಷ್ಟ ೧೨ ವಾರಗಳು ಎಲ್ಲಾ ಥಿಯೇಟರುಗಳಲ್ಲಿಯೂ ಪ್ರದರ್ಶನ ಮಾಡತಕ್ಕ ಒಂದು ಪ್ರಯತ್ನವನ್ನು ಮಾಡುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದಾರೆ. ಆದರೆ ವಾಸ್ತವವಾಗಿ ಆ ರೀತಿ ಕನ್ನಡ ಚಲನಚಿತ್ರಕ್ಕೆ ಪ್ರದರ್ಶನ ಮಾಡಲು ಅವಕಾಶವನ್ನು ಕೊಡುತ್ತಿಲ್ಲ. ಉತ್ತಮವಾದ ಚಿತ್ರಗಳ ಪ್ರದರ್ಶನಕ್ಕೆ ಮಾತ್ರ ಅವಕಾಶವನ್ನು ಕೊಟ್ಟಿದ್ದಾರೆ. ಎಲ್ಲಾ ಕನ್ನಡ ಚಲನ ಚಿತ್ರಗಳಿಗೂ ಅವಕಾಶವನ್ನು ಕೊಡುತ್ತಿಲ್ಲ. ಕನ್ನಡಕ್ಕೆ ಅವಮಾನ ಮಾಡಿದ್ದಾರೆ. ಮೂರು ಕೋಟಿ ಕನ್ನಡಿಗರಿಗೆ ಬೇಕಾದ ಕನ್ನಡ ಚಲನಚಿತ್ರವನ್ನು ರದ್ದು ಮಾಡಿ ದುಡ್ಡಿನ ಆಸೆಗೋಸ್ಕರ ಹಿಂದಿ ಚಿತ್ರವನ್ನು ಪ್ರದರ್ಶನ ಮಾಡಿದ್ದಾರೆ. ಸುಮಾರು ೫೦ ವಾರಗಳ ಕಾಲ ನಡೆಯತಕ್ಕ ಒಳ್ಳೆಯ ದುಡ್ಡು ಬರತಕ್ಕ ಪ್ರದರ್ಶನಕ್ಕೆ ಒಳ್ಳೆಯ ಅವಕಾಶ ಇರುವಾಗ ಕನ್ನಡ ಚಲನಚಿತ್ರಕ್ಕೆ ಪ್ರೋತ್ಸಾಹ ಕೊಟ್ಟಿಲ್ಲ. ಎಗ್ಜಿಬಿಟರ್ಸ್ ಮತ್ತು ಡಿಸ್ಟ್ರಿಬ್ಯೂಟರ್ಸ್ ಎಲ್ಲರೂ ಪಿತೂರಿ ಮಾಡಿ ಕನ್ನಡ ಚಲನಚಿತ್ರವನ್ನು ತುಳಿಯತಕ್ಕ ಪ್ರಯತ್ನವನ್ನು ರಾಜಧಾನಿಯಲ್ಲಿ ಮಾಡಿದ್ದಾರೆ ಎಂದು ಬಹಳ ದುಃಖದಿಂದ ಹೇಳಬೇಕಾಗಿದೆ ನಮ್ಮ ಕನ್ನಡ ಭಾಷೆಯ ಚಲನಚಿತ್ರಗಳು ನಮ್ಮ ನಾಡಿನ ಹೊರಗಡೆ ಹೋಗುವುದಕ್ಕೆ ಸಾಧ್ಯವಿಲ್ಲ. ಹಿಂದಿ ಚಲನಚಿತ್ರವಾದರೆ ಇಡೀ ರಾಷ್ಟ್ರದ ಂತ ಪ್ರದರ್ಶನವಾಗತಕ್ಕ ಅವಕಾಶ ಇದೆ. ೬೦ ಕನ್ನಡ ಚಲನಚಿತ್ರಗಳು ಪ್ರದರ್ಶನಕ್ಕೆ ಬಾರದೆ ಒಳಗಡೆ ಮೂಲೆಗುಂಪಾಗಿ ಬಿದ್ದಿರುವುದು ದುರ್ದೈವದ ಸಂಗತಿ. ಇದಕ್ಕೆ ಸರ್ಕಾರದವರು ಪ್ರೊಟೆಕ್ಷನ್ ಕೊಡಬೇಕು. ಉತ್ತಮ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಚಿತ್ರಮಂದಿರಕ್ಕೆ ೧೭ ಸಾವಿರ ರೂಪಾಯಿಗಳ ರೆಂಟ್ ಕೊಡಬೇಕು. ಅಷ್ಟು ಹಣವನ್ನು ಕೊಡುವುದಕ್ಕೆ ಕನ್ನಡಿಗರಿಗೆ ಶಕ್ತಿ ಇಲ್ಲ. ಸರ್ಕಾರದವರು ೧೨ ವಾರಗಳು ಕಡ್ಡಾಯವಾಗಿ ಕನ್ನಡ ಚಲನಚಿತ್ರವನ್ನು ಪ್ರದರ್ಶನ ಮಾಡಬೇಕು ಎಂದು ಏನು ಹೇಳಿದ್ದಾರೆ ಅದನ್ನು ತಿರುಗು ಮುರುಗು ಮಾಡಿ ಹಿಂದಿ ಚಿತ್ರಗಳನ್ನು ಮತ್ತು

ಇತರ ಬೇರೆ ಚಿತ್ರಗಳನ್ನು ಒಂದು ವರ್ಷದಲ್ಲಿ ೧೨ ವಾರಗಳು ಮಾತ್ರ ಪ್ರದರ್ಶನ ಮಾಡಿ ಇನ್ನುಳಿದ ದಿನಗಳಲ್ಲಿ ಕನ್ನಡ ಚಲನಚಿತ್ರವನ್ನು ಕಡ್ಡಾಯವಾಗಿ ಪ್ರದರ್ಶನ ಮಾಡಬೇಕು ಎಂದು ಗೊತ್ತು ಮಾಡಬೇಕು. ಕನ್ನಡ ಚಲನಚಿತ್ರಕ್ಕೆ ಜಾಸ್ತಿ ಅವಕಾಶವನ್ನು ಕೊಡಬೇಕು. ಕನಿಷ್ಟ ಒಂದು ವರ್ಷದಲ್ಲಿ ೬ ತಿಂಗಳು ಕಾಲ ಕನ್ನಡ ಚಲನಚಿತ್ರವನ್ನು ಪ್ರದರ್ಶನ ಮಾಡಬೇಕು ಎಂದು ಸರ್ಕಾರದವರು ಚಿತ್ರಮಂದಿರಗಳ ಮಾಲೀಕರಿಗೆ ಡೈರೆಕ್ಷನ್ ಕೊಡಬೇಕು. ಆ ರೀತಿ ಮಾಡಿದರೆ ಈಗ ಮೂಲೆಗುಂಪಾಗಿ ಬಿದ್ದಿರುವ ಕನ್ನಡ ಚಲನಚಿತ್ರಗಳು ಹೊರಗಡೆ ಬರುತ್ತವೆ. ಈ ರೀತಿ ಒಂದು ವ್ಯವಸ್ಥೆಯನ್ನು ಮಾಡಿ ಕನ್ನಡ ಚಲನಚಿತ್ರಕ್ಕೆ ಬಂದಿರುವ ದುರ್ಗತಿಯನ್ನು ಹೋಗಲಾಡಿಸಬೇಕೆಂದು ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಎಚ್. ಶ್ರೀನಿವಾಸ್ (ವಾರ್ತಾ ಹಾಗೂ ಯುವಜನ ಸೇವಾ ರಾಜ್ಯ ಮಂತ್ರಿಗಳು)— ಮಾನ್ಯ ಅಧ್ಯಕ್ಷರೇ, ಎರಡು ಪ್ರಶ್ನೆಗಳನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ರಾಮದೇವ್ ಅವರು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಒಂದನೆಯದು, ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮದವರು ತಯಾರಿಸಿರುವ ಚಲನಚಿತ್ರಕ್ಕೆ ಚಿತ್ರಮಂದಿರಗಳಲ್ಲಿ ಪ್ರದರ್ಶನ ಅವಕಾಶ ಸಿಕ್ಕದೇ ಇರುವುದರಿಂದ ತೊಂದರೆಯಾಗಿದೆ, ಇದರಿಂದ ಲುಕ್ಸಾನಿಗೆ ಕಾರಣವಾಗಿದೆ. ನಾನು ಅವರಿಗೆ ತಿಳಿಸಬಯಸುತ್ತೇನೆ, ಮೆಜೆಸ್ಟಿಕ್ ಥಿಯೇಟರಿನವರು ಈ ಚಿತ್ರವನ್ನು ಹಾಕುತ್ತೇವೆ ಎಂದು ಯಾವರೀತಿಯಲ್ಲಿ ಒಪ್ಪಂದವನ್ನೂ ಮಾಡಿಕೊಂಡಿರಲಿಲ್ಲ. ನಮ್ಮ ಹಂಚಿಕೆದಾರರಾದ ಶ್ರೀಮಾನ್ ಮಧುಸೂದನ್ ಮೂವೀಸ್ ಅವರು ಅವರ ಪತ್ರದಲ್ಲಿ ಏನು ಹೇಳಿರುತ್ತಾರೆ ಎಂದರೆ, Exhibitors have shown inclination to screen our Kannada pictures? ಅಂತ ಹೇಳಿದ್ದಾರೆ. ಅಷ್ಟು ಹೊರತು ಒಪ್ಪಂದ ಆದಮೇಲೆ ಪಡುವಾರಹಳ್ಳಿ ಪಾಂಡವರು ಚಿತ್ರ ಪ್ರದರ್ಶನವನ್ನು ರದ್ದುಪಡಿಸಿದ ರೀತಿಯಲ್ಲಿ ಅಂಥಾ ಘಟನೆ ಇಲ್ಲಿ ಆಗಿಲ್ಲ. ಮತ್ತು ಚಿತ್ರವನ್ನು ಈಗಾಗಲೇ ಬೇರೆ ಚಿತ್ರಮಂದಿರದಲ್ಲಿ ಪ್ರದರ್ಶನಕ್ಕೆ ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಸುಮಾರು ೮ ಮತ್ತು ಎಲ್ಲಾ ಸೇರಿ ೨೧ ಚಿತ್ರಮಂದಿರಗಳಲ್ಲಿ ಈ ಚಿತ್ರ ಬಿಡುಗಡೆಯಾಗಿದೆ, ಚೆನ್ನಾಗಿ ನಡೆಯುತ್ತಿವೆ. ಸದಾನಂದ, ಪ್ರೇಮಜ್ವಾಲೆ ಚಿತ್ರಗಳು ಪ್ರದರ್ಶನಕ್ಕೆ ಸಿದ್ಧವಾಗಿದೆ. ಎಲ್ಲೆಲ್ಲಿ ಅದನ್ನು ಬಿಡುಗಡೆ ಮಾಡಬೇಕು ಎನ್ನುವ ಬಗ್ಗೆ ಚಲನಚಿತ್ರ ಅಭಿವೃದ್ಧಿ ನಿಗಮದವರು ಆಲೋಚನೆ ಮಾಡುತ್ತಿದ್ದಾರೆ. ಬಿಡುಗಡೆ ಮಾಡುವುದಕ್ಕೆ ಒಂದು strategy ಇರಬೇಕಾಗುತ್ತದೆ. ಒಂದೇ ದಿವಸ ಎಲ್ಲಾ ಚಿತ್ರಗಳನ್ನೂ ಬಿಡುಗಡೆ ಮಾಡುವುದಕ್ಕಾಗುವುದಿಲ್ಲ. ಕೆಲವು ಅಂಶಗಳನ್ನು ಗಣನೆಗೆ ತೆಗೆದುಕೊಂಡು ಆದಷ್ಟು ಬೇಗ ಬಿಡುಗಡೆ ಮಾಡುತ್ತೇವೆ. ಇನ್ನೊಂದು ಚಿತ್ರ ಮಂಗಿಯುವ ಹಂತದಲ್ಲಿ ಇದೆ, ಇನ್ನೂ ಮುಕ್ತಾಯವಾಗಿಲ್ಲ. ಆದ್ದರಿಂದ ಚಲನಚಿತ್ರ ಅಭಿವೃದ್ಧಿ ನಿಗಮದವರು ತಯಾರಿಸತಕ್ಕ ಚಲನಚಿತ್ರಗಳ ಹಂಚಿಕೆಯ ಬಗ್ಗೆ ಸಾಕಷ್ಟು ಕಾರ್ಯಕ್ರಮಗಳನ್ನು ಸಾಕಷ್ಟು ಆಲೋಚನೆ ಮಾಡಿ ಅದರ ಹಿತರಕ್ಷಣೆ ಆಗಬೇಕು, ಅದಕ್ಕೆ ಹಾಕಿರತಕ್ಕ ಬಂಡವಾಳ ಯಾವರೀತಿಯಲ್ಲಾದರೂ ಪ್ರಯತ್ನಮಾಡಿ ವಾಪಸ್ಸು ಬರುವಂತೆ ಮಾಡಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಪ್ರಯತ್ನ ಮಾಡುತ್ತಿದ್ದೇವೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ನಾನು ಬಯಸುತ್ತೇನೆ.

ಇನ್ನು ಎರಡನೆಯದಾಗಿ, ಕನ್ನಡ ಚಲನಚಿತ್ರವನ್ನು ಪ್ರದರ್ಶನ ಮಾಡುವುದಕ್ಕೆ ಸಾಕಷ್ಟು ಅವಕಾಶ ಕನ್ನಡ ರಾಜ್ಯದಲ್ಲಿ ಹಾಗೂ ರಾಜ್ಯದ ರಾಜಧಾನಿಯಲ್ಲಿ ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ರಾಜ್ಯದ ರಾಜಧಾನಿಯಲ್ಲಿ ಬಹಳ ಪ್ರಾಮುಖ್ಯ ಪ್ರದೇಶವಾದ ಕೆಂಪೇಗೌಡ ರಸ್ತೆಯಲ್ಲಿರುವ ಥಿಯೇಟರುಗಳಲ್ಲಿ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಅವಕಾಶ ಸಿಕ್ಕಬೇಕು ಎನ್ನುವುದು ಅನೇಕ ವರ್ಷಗಳಿಂದ ಇದೆ, ವರ್ಷವರ್ಷಕ್ಕೆ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಉತ್ತಮವಾಗುತ್ತಾ ಹೋಗಿದೆ. ಕೆಂಪೇಗೌಡ ರಸ್ತೆಯಲ್ಲಿ ಒಂದೆರಡು ಕನ್ನಡ ಚಿತ್ರಗಳು ಪ್ರದರ್ಶನವಾಗುತ್ತಿವೆ. ಸುಂಕ ಚಿತ್ರವನ್ನು ಕೆಂಪೇಗೌಡ ರಸ್ತೆಯ ಒಂದು ಥಿಯೇಟರಿನಲ್ಲಿ ರೆಗ್ಯುಲರ್ ಷೋ ಇನ್ನೊಂದು ಥಿಯೇಟರಿನಲ್ಲಿ ಬೆಳಗ್ಗೆ ಪ್ರದರ್ಶನಕ್ಕೆ ಬಿಡುಗಡೆ ಮಾಡಿದೆ. ಈ ಒಂದು ಅವಕಾಶವನ್ನು ಜಾಸ್ತಿ ಮಾಡಬೇಕು. ಕಡ್ಡಾಯವಾಗಿ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಬೇಕು. ಇಷ್ಟು ವಾರಗಳಕಾಲ ಕನ್ನಡ ಚಲನಚಿತ್ರವನ್ನು ಪ್ರದರ್ಶನ ಮಾಡಲೇಬೇಕು ಎಂದು ಕಡ್ಡಾಯ ಮಾಡಬೇಕು. ಹಿಂದೆ ಆದ ಕೆಲವು ಒಪ್ಪಂದದ ರೀತಿಯಲ್ಲಿ ಕನ್ನಡ ಚಲನಚಿತ್ರವನ್ನು ಪ್ರದರ್ಶನ ಮಾಡಬೇಕೆಂಬ ನಿಯಮಾವಳಿಯನ್ನು ಮಾಡಿಕೊಟ್ಟಿದೆ. ಆದರೆ ಅದನ್ನು ಎಲ್ಲರೂ ಪಾಲಿಸುತ್ತಿಲ್ಲ ಎನ್ನುವ ಆಪಾದನೆ ಇದೆ. ಹೇಗೆ ಅದನ್ನು ಕಡ್ಡಾಯ ಮಾಡಬೇಕು ಎನ್ನುವ ಪ್ರಶ್ನೆ ಇದೆ. ಚಿತ್ರಮಂದಿರಗಳವರ ಮೂಲಭೂತ ಹಕ್ಕಿನ ಪ್ರಶ್ನೆ ಇದೆ. ನಾವು ಅವರ ಹಕ್ಕಿನ ವಿಚಾರವನ್ನು ತೆಗೆದು ಕೊಂಡರೆ, ಈ ಕನ್ನಡ ಚಿತ್ರಗಳಲ್ಲಿ ಲುಕ್ಸಾನು ಆದರೆ ಅದನ್ನು ಭರ್ತಿ ಮಾಡಿಕೊಡಬೇಕು ಎನ್ನುವ ಪ್ರಶ್ನೆ

ಬರುತ್ತದೆ. ಆ ರೀತಿ ಅವರು ಪ್ರಶ್ನೆಮಾಡತಕ್ಕ ಸಂದರ್ಭ ಬರಬಹುದು. ಈ ದೃಷ್ಟಿಯಿಂದ ಕನ್ನಡ ಚಲನಚಿತ್ರಕ್ಕೆ ನಮ್ಮ ರಾಜ್ಯದಲ್ಲಿ. ರಾಜಧಾನಿಯಲ್ಲಿ ಇನ್ನೂ ಹೆಚ್ಚಿನ ಪ್ರದರ್ಶನಕ್ಕೆ ಅವಕಾಶವನ್ನು ಕೊಡಿಸುವುದಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ಆಲೋಚನೆ ಮಾಡುವಾಗ ಇದರ ಬಗ್ಗೆ ಪರಿಪೂರ್ಣವಾದ ರೀತಿಯಲ್ಲಿ ಇಂಥಾ ಕ್ರಮವನ್ನು ತೆಗೆದುಕೊಂಡರೆ ಸಾಧ್ಯವೇ ಅಥವಾ ಸಾಧುವೇ ಎಂದು ಅಂತಿಮ ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಾಗಿಲ್ಲ. ಆದಷ್ಟು ಬೇಗ ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಅದನ್ನು ನಾವು ಮಾಡುವುದಕ್ಕೆ ಖಂಡಿತಾ ಪ್ರಯತ್ನ ಮಾಡುತ್ತೇವೆ. ಮುಖ್ಯವಾಗಿ ಚಲನಚಿತ್ರ ಮಂದಿರಗಳ ಮಾಲೀಕರುಗಳನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ, ದಯವಿಟ್ಟು ಕಡ್ಡಾಯವಾದ ಕಾನೂನು ತರುವುದಕ್ಕೆ ಮುಂಚೆ, ಜನರು ರೊಚ್ಚಿಗೇಳುವುದಕ್ಕೆ ಮುಂಚೆ ದಯವಿಟ್ಟು ಸ್ವಲ್ಪ ಅಭಿಮಾನವನ್ನು ತೋರಿಸಿ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಆದಷ್ಟೂ ಜಾಸ್ತಿ ಅವಕಾಶವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ.

ಪಾಂಡವರನ್ನು ಕೌರವರು ಪೀಡಿಸಿದರು ಎಂದು ಈ ಪಡುವಾರ ಹಳ್ಳಿ ಪಾಂಡವರನ್ನು ಚಿತ್ರ ಮಂದಿರದವರು ತ್ರಿಶೂಲದಲ್ಲಿ ತಿವಿದರು. ಆದರೆ ಅದು ಬೇಡವೆಂದು ನಾವು ಹೇಳಿದ್ದಾಯಿತು. ಈ ಸಂದರ್ಭದಲ್ಲಿ ನಾನು ಹೇಳುವುದಿಷ್ಟೆ. ಕನ್ನಡ ಚಿತ್ರಗಳಿಗೆ ತೊಂದರೆ ಉಂಟಾಗುವ ಸಂದರ್ಭ ಬಂದರೆ ಸರ್ಕಾರ ಇದರ ಬಗ್ಗೆ ಒಂದು ಅಗತ್ಯವಾದ ಕಾನೂನನ್ನು ತಂದು ಕಡ್ಡಾಯ ಮಾಡಿಯೇ ಮಾಡುತ್ತದೆ. ಯಾವುದೇ ಕಾರಣದಿಂದಲೂ ಕನ್ನಡ ಚಲನ ಚಿತ್ರಗಳ ಹಿತರಕ್ಷಣೆ ಮಾಡುವುದರಲ್ಲಿ ಸರ್ಕಾರ ಹಿಂದೆಗೆಯುವುದಿಲ್ಲ. ನಾನು ಅವರಲ್ಲಿ ಕೇಳಿಕೊಳ್ಳುವುದಿಷ್ಟೆ, ಚಿತ್ರಮಂದಿರಗಳ ಮಾಲೀಕರು ಕನ್ನಡ ಚಿತ್ರಗಳ ಪಾಲಿಗೆ ಕೌರವರು ಆಗಬಾರದು ಎಂದು ಆದರೆ ಮಾಲೀಕರು ನಮಗೆ ಕನ್ನಡ ಚಿತ್ರಗಳಿಂದ ನಷ್ಟವಾಗುತ್ತದೆ ಎಂದು ಹೇಳಬಹುದು. ಆದರೆ ನಾನು ಹೇಳುವುದೇನೆಂದರೆ, ಕನ್ನಡ ಚಿತ್ರಗಳನ್ನು ಹಾಕುವುದರಿಂದ ಅಷ್ಟೇನೂ ನಷ್ಟವಾಗಲಾರದು, ಆದುದರಿಂದ ಈ ಚಲನಚಿತ್ರಮಂದಿರಗಳ ಮಾಲೀಕರನ್ನು ಸರ್ಕಾರದವರು ಯಾವುದೇ ವಿಧವಾದ ಅನಿವಾರ್ಯದ ಪರಿಸ್ಥಿತಿಗೆ ನೂಕುವುದಕ್ಕಿಂತ ಮುಂಚೆ ಅವರೇ ಸ್ವತಃ ಮುಂದೆ ಬಂದು ಕನ್ನಡ ಚಿತ್ರಗಳನ್ನು ಪ್ರದರ್ಶಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

Business of the House
ANNOUNCEMENT

MR. SPEAKER.—The Business Advisory Committee at a sitting held on 5th August 1978 have recommended that current sittings of the House may continue till the 12th August, 1978. On 7th and 8th August, the House will transact non-official business. On 9th, 1 th, 11th and 12th, the House will take up Legislative Business.

Discussion on a matter of urgent Public Importance for Short Duration under rule 59:

re: the one man Commission report on the affairs of Mysore University

Notice to call the Advocate General to attend the debate

MR. SPEAKER.—Before I call upon the Hon'ble Minister to reply on the discussions held already on a matter of urgent public importance for Short Duration regarding the One Man Commission Report on the Affairs of the University of Mysore, I would like to bring to the notice of the Hon'ble House that Sriyuths, B.V. Kakkilaya, M. Veerappa Moiley, Prabhaker Telkar, U. T. Fareed, and B. Bhasker Shetty have given a notice under Rule 146...